

ಎಕ್ಸ್‌ಪರ್ಟ್ ಕಮಿಟಿ ಮೀಟಿಂಗ್ ಆದ ಮೇಲೇ ನಿಮಗೆ ಪರ್ಮನೆಂಟ್ ರಿಜಿಸ್ಟ್ರೇಶನ್ ಸಿಗೋದು' ಎಂದು ಗತ್ತಿನಲ್ಲಿ ಹೇಳಿ ಸುಮ್ಮನೆ ಫೈಲಿನಲ್ಲಿ ಮುಳುಗಿದ.

ಇನ್ನು ವಾಪಸ್ ಡಿಪಾರ್ಟ್‌ಮೆಂಟಿಗೆ ಹೋದರೆ ಆ ಹೆಡ್ಡು, ಗೈಡು ತಲೆ ತಿನ್ನುವುದು ಗ್ಯಾರಂಟಿ ಎನ್ನಿಸಿ ಕ್ಯಾಂಪಸ್ ಬಿಟ್ಟು ಎಲ್ಲಾದರೂ ಹೊರಡೋಣ ಎಂದುಕೊಳ್ಳುತ್ತಾ ಹುಲಗಪ್ಪ ಹೊರ ಬಂದ; ಕಾರಿಡಾರಿನಲ್ಲೇ ಕಾಯುತ್ತಿದ್ದ ಗೈಡು, 'ಗೊತ್ತಾಯ್ತಪ್ಪಾ! ಥೂ ಏನ್ ದರಿದ್ರ ನನ್ಮಕ್ಕಳಯ್ಯಾ ಇವರೆಲ್ಲ! ಏನ್ ಮಾಡ್ತೀಯ?' ಅಂದ. ಮೂರು ವರ್ಷಗಳ ಕೆಳಗೆ ಒಂದು ಸಲ ರಿಸರ್ಚ್ ಶುರು ಮಾಡಿ, ಮೆಟೀರಿಯಲ್ ಹುಡುಕಲು ಹೋದವನು ಎರಡು ವರ್ಷ ಬಿಟ್ಟು ಮತ್ತೆ ಬಂದು ರಿಸರ್ಚಿಗೆ ಸೇರಿಕೊಂಡಿದ್ದರೂ ಹುಲಗಪ್ಪನ ಶ್ರಮ, ಟ್ಯಾಲೆಂಟು ಗೈಡಿಗೆ ಗೊತ್ತಿತ್ತು. ಗೈಡು ಇದ್ದಿದ್ದರಲ್ಲಿ ಡೆಮಾಕ್ರೆಟಿಕ್ ಮನುಷ್ಯನಾದ್ದರಿಂದ ಹುಲಗಪ್ಪ ಸಲಿಗೆಯಿಂದಲೇ ಹೇಳಿಕೊಂಡ: 'ಅಲ್ಲಾ ಸಾರ್, ಅಷ್ಟು ದೊಡ್ಡ ರೈಟರಂತೆ! ಅವರ ಮುಂದೆ ನಾನ್ಯಾವ ತೊಪ್ಪಲು ಸಾರ್! ಇದ್ಯಾಕೆ ಇವರೆಲ್ಲ ಹಿಂಗೆ ಪತರುಗುಡ್ತಾ ಇದಾರೆ! ಅವರ ಮೆಟೀರಿಯಲ್ ಇಟ್ಕೊಂಡು ಅವರು ಬರೀತಾರೆ! ನನ್ನ ಮೆಟೀರಿಯಲ್ ಇಟ್ಕೊಂಡು ನಾನು ಬರೀತೀನಿ! ನಿಮಗೇ ತೋರಿಸಿದೀನಲ್ಲ ಸಾರ್? ನಾನೂ ಅಥೆಂಟಿಕ್ ಡಿಟೈಲ್ಸ್ ಇಟ್ಕೊಂಡೇ ಬರ್ದಿದೀನಲ್ಲ ಸಾರ್!'

'ಅದೇ ಕಣಲೇ ಈ ನನ್ನಕ್ಕಳ ಸಮಸ್ಯೆ! ರಿಸರ್ಚರ್ ಮಾಡಿದ್ದನ್ನ ಗೈಡ್ ತಲೆಗೆ ಕಟ್ಟೋಕೆ ನೋಡ್ತಿರ್ತಾರೆ! ಕನ್ನಡ ಯೂನಿವರ್ಸಿಟಿಲಿ ಅವನ್ಯಾವನೋ ಇಂಥದೇ ಕೇಸಲ್ಲಿ ಸಿಂಡಿಕೇಟ್ ಮೆಂಬರುಗಳಿಗೆಲ್ಲ ಮೂಕರ್ಜಿ ಬರೆದಿದ್ದ, ಗೊತ್ತಲ್ಲ! ನೀನೇನೋ ಇಂಡಿಪೆಂಡೆಂಟಾಗಿ ಯೋಚನೆ ಮಾಡ್ತೀಯ, ಸರಿ! ಯೂ ಆರ್ ರಿಯಲೀ ಬ್ರೈಟ್! ಹಾಳಾಗೋಗ್ಲಿ, ಇನ್ನೇನು ಆವಯ್ಯನ ಪುಸ್ತಕ ಈ ವರ್ಷ ಬರುತ್ತಂತೆ. ಅಷ್ಟರತನಕ ನೋಟ್ಸ್ ಮಾಡ್ತಾ ಇರು. ಒಟ್ಟಿಗೇ ಬರೆದ್ರಾತು!'

ಹುಲಗಪ್ಪನಿಗೆ ರೇಗಿ ಹೋಯಿತು. ತ್ರಿಭುವನ ಮಹಿಪಾಲರ ಕಾಲದ ಸಮಾಜ ಕುರಿತ ಅಧ್ಯಾಯದಲ್ಲಿ ಆ ಕಾಲದ ಫ್ಯೂಡಲ್ ಅಥವಾ ಜಮೀನ್ದಾರಿ ಧೋರಣೆಯನ್ನು ಅಧ್ಯಯನ ಮಾಡಲೆತ್ನಿಸುತ್ತಿದ್ದ ಹುಲಗಪ್ಪನಿಗೆ ಥಟ್ಟನೆ ಅನ್ನಿಸಿತು: 'ಓಹೋ! ಫ್ಯೂಡಲ್ ಧೋರಣೆ ಸ್ಟಡಿ ಮಾಡಲು ರಾಜರ ಕಾಲಕ್ಕೇನೂ ಹೋಗಬೇಕಾಗಿಲ್ಲ! ಇಲ್ಲೇ ಹಿರಿಯ ಲೇಖಕ ರಾವ್ ಬಹದ್ದೂರ್ ದೇಸಾಯಿ, ತಾಸೀಲ್ದಾರ್, ವೈಸ್ ಚಾನ್ಸಲರ್ ಇವರೆಲ್ಲ ನನ್ನ ಒಂದು ಲೇಖನದ ಬಗ್ಗೆ ಎಗರಾಡುತ್ತಿರುವುದನ್ನು ನೋಡಿದರೆ ಸಾಕು, ಫ್ಯೂಡಲ್ ಮನಸ್ಸುಗಳ ವೈವಿಧ್ಯಮಯ ಮುಖಗಳು ಕಾಣುತ್ತವೆ! ಇತಿಹಾಸದ ಜನರ ವರ್ತನೆಗಳನ್ನು ನಾವು ಅರ್ಥ ಮಾಡಿಕೊಳ್ಳುವುದು ಕೂಡ ನಮ್ಮ ಕಾಲದ ಕನ್ನಡಿಯಲ್ಲಿ ತಾನೇ!'

## 4

ಇದೆಲ್ಲ ಆಗಿ ಮೂರು ನಾಕು ದಿನ ಕಳೆದಿತ್ತು. ಆಗಿದ್ದಾಗಲಿ, ಆ ರಾವ್ ಬಹದ್ದೂರ್ ದೇಸಾಯಿಯನ್ನೇ ನೋಡಿಬಿಡೋಣ ಎಂದುಕೊಂಡ ಹುಲಗಪ್ಪ ಬೆಳಗ್ಗೆ ಒಂಬತ್ತು ಗಂಟೆಯ ಹೊತ್ತಿಗೆ ಆಟೋ ಹತ್ತಿ ಕೋಟೆಯ ಬತೇರಿಯ ಬಳಿ ಬಂದಿಳಿದು ಕತ್ತೆತ್ತಿ ನೋಡಿದ. ದೇಸಾಯರು ವಸತಿ ಮಾಡಿದ್ದ ಪ್ರವಾಸಿ ಬಂಗಲೆ ಕೋಟೆಯ ತುದಿಯಲ್ಲಿತ್ತು. ಅಬ್ಬಬ್ಬಬ್ಬ! ಮೂರು ಸುತ್ತಿನ ಕೋಟೆಯ ರಕ್ಷಣೆಯಲ್ಲಿ ಬರೀತಿದಾನೆ ಆಸಾಮಿ! ಆವಯ್ಯನಿಗೆ ಏನಾದರೂ ಬೇಕಾದರೆ ಅಲ್ಲಿಂದ ಇಳಿದು, ಹತ್ತಿ ಹೇಗೆ ಹೋಗುತ್ತಾನೋ ಎಂದುಕೊಂಡವನಿಗೆ, ಗಣ್ಯರಿಗಾಗಿ ಕೋಟೆಯ ಹಿಂದಿನಿಂದ ಪ್ರವಾಸಿ ಬಂಗಲೆಗೆ ಕಾರು ರಸ್ತೆ ಮಾಡಿರುವುದು ನೆನಪಾಯಿತು.

ಬಿಸಿಲೇರುವ ಮೊದಲು ಪ್ರವಾಸಿ